

# ಕಾಡನ್ನು ಕಾಪಾಡುವ ಸೋನಲ್

ಕೆ.ಎಸ್‌. ಗಿರೀಶ

ಎರಡು ಸಾವಿರಕ್ಕೂ ಅಧಿಕ ಕಿ.ಮೀ.ನಿಂದ ಬಂದು ಕನ್ನಡ ಕಲಿತು, ಎಲ್ಲೆಲ್ಲಿ ಕೆಲಸ ಮಾಡಿದ್ದಾರೋ ಅಲ್ಲೆಲ್ಲ ಮೊದಲ ಮಹಿಳಾ ಅಧಿಕಾರಿ ಎಂಬ ಹೆಗ್ಗಳಿಕೆ ಪಡೆದವರು ಸೋನಲ್ ವೃಷ್ಣಿ. ಅತಿ ವಿರಳ ಸಂಖ್ಯೆಯಲ್ಲಿ ಮಹಿಳೆಯರು ಕಾರ್ಯನಿರ್ವಹಿಸುತ್ತಿರುವ ಅರಣ್ಯ ಇಲಾಖೆಯಲ್ಲಿ ಉನ್ನತ ಸ್ಥಾನ ಗಳಿಸುವ ಮೂಲಕ ಪುರುಷರ ಪಾರುಪತ್ಯವನ್ನು ಮುರಿದವರು ಇವರು. ಮಾತ್ರವಲ್ಲ, ಒಬ್ಬ ಮಹಿಳೆ ತನ್ನ ಸಂಸಾರವನ್ನು, ಮನೆಯನ್ನು, ಪತಿ, ಮಕ್ಕಳನ್ನು ಹೇಗೆ ಕಾಯುವಳೋ ಅಷ್ಟೇ ಜತನದಿಂದ ಕಾಡನ್ನೂ, ವನ್ಯಜೀವಿಗಳನ್ನೂ ಕಾಪಾಡಬಲ್ಲಳು ಎಂಬುದಕ್ಕೆ ಇವರು ಉದಾಹರಣೆಯಾಗಿದ್ದಾರೆ.

ಸದ್ಯ, ಕೊಡಗು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿಯಾಗಿರುವ ಸೋನಲ್ ಅವರ ತವರು ಉತ್ತರಪ್ರದೇಶದ ಲಖನೌ. 2011ರಲ್ಲಿ ಯುಪಿಎಸ್‌ಸಿ ನಡೆಸುವ ಭಾರತೀಯ ಅರಣ್ಯ ಸೇವೆ (ಐಎಫ್‌ಎಸ್) ಪರೀಕ್ಷೆಯಲ್ಲಿ ಉತ್ತೀರ್ಣರಾಗಿ 2 ವರ್ಷಗಳ ತರಬೇತಿ ಪಡೆದು ಸೇವೆಗಾಗಿ ಆಯ್ದುಕೊಂಡಿದ್ದು ಕರ್ನಾಟಕವನ್ನು. 2013ರಲ್ಲಿ ರಾಜ್ಯಕ್ಕೆ ಬಂದ ಅವರು ಇಲ್ಲಿಯವರೆಗೆ ಅಲಂಕರಿಸಿದ್ದ ಅನೇಕ ಹುದ್ದೆಗಳಲ್ಲಿ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಹಾವೇರಿ, ಗದಗ, ಧಾರವಾಡದಲ್ಲಿ ಮೊದಲ ಮಹಿಳಾ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಎಫ್‌ಒ) ಆಗಿ, ಹಂಪಿಯ ಮೃಗಾಲಯದಲ್ಲಿ ಮೊದಲ ಮಹಿಳಾ ಕಾರ್ಯನಿರ್ವಾಹಕ ನಿರ್ದೇಶಕಿಯಾಗಿ ಹಾಗೂ ಈಗ ಕೊಡಗು ವೃತ್ತದ ಮೊದಲ ಮಹಿಳಾ ಅರಣ್ಯ ಸಂರಕ್ಷಣಾಧಿಕಾರಿ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ.

ಸಾಮಾನ್ಯವಾಗಿ, ಹೊರರಾಜ್ಯದಿಂದ ಬಂದವರು ಇಲ್ಲಿ ಕನ್ನಡ ಕಲಿಯುವುದಿಲ್ಲ, ಕನ್ನಡದಲ್ಲಿ ಮಾತನಾಡುವುದಿಲ್ಲ ಎಂಬ ಆರೋಪ ಇದೆ. ಆದರೆ, ಇವರ ನಾಲಿಗೆಯಲ್ಲಿ ಕನ್ನಡದ ಪದಗಳು ಸುಲಲಿತವಾಗಿ ಒಡಮೂಡುತ್ತವೆ. ಕವಿ ಮಹಲಿಂಗರಂಗ ತನ್ನ ‘ಅನುಭವಾಮೃತ’ ಕೃತಿಯಲ್ಲಿ ಹೇಳುವಂತೆ ‘ಸುಲಿದ ಬಾಳೆಯ ಹಣ್ಣಿನಂದದಿ... ಕನ್ನಡ’ ಎಂಬಂತೆ ಇವರಿಗೆ ಕನ್ನಡ ಎನ್ನುವುದು ಅಷ್ಟು ಸುಲಭ.

‘ಕನ್ನಡ ತುಂಬಾ ಸುಲಭದ ಭಾಷೆ. ಮಾತ್ರವಲ್ಲ, ನನಗಿಷ್ಟವಾದ ಭಾಷೆ. ನಾವು ಯಾವ ನೆಲದಲ್ಲಿ ಇರುತ್ತೇವೋ ಆ ನೆಲದ ಭಾಷೆ, ಸಂಸ್ಕೃತಿಗೆ ಬದ್ಧರಾಗಿರಬೇಕು’ ಎಂದು ಅಭಿಮಾನದಿಂದಲೇ ಅವರು ಹೇಳುತ್ತಾರೆ. ಹಾಗಾಗಿ, ಅವರು ಸ್ಥಳೀಯರೊಂದಿಗೆ ಮಾತನಾಡುವಾಗ ಕನ್ನಡದಲ್ಲೇ ಪ್ರತಿಕ್ರಿಯಿಸುತ್ತಾರೆ.

ತಮ್ಮ ಕಾಯಕವನ್ನು ಅತಿ ನಿಷ್ಠೆಯಿಂದ ನಿರ್ವಹಿಸುತ್ತಿರುವ ಇವರು ಈ ಹಿಂದೆ 2016–17ರಲ್ಲಿ ಹಿರೇಕೆರೂರಿನಲ್ಲಿ ಅರಣ್ಯ ಒತ್ತುವರಿ ತೆರವಿನಂತಹ ಕ್ಲಿಷ್ಟಕರ ಕಾರ್ಯಕ್ಕೆ ಕೈ ಹಾಕಿ ಯಶಸ್ವಿಯಾಗಿದ್ದರು. ಎಷ್ಟೇ ಅಡ್ಡಿ, ಆತಂಕ, ಒತ್ತಡಗಳು ಎದುರಾದರೂ, 30 ಜನರ ಭಾರಿ ಪ್ರತಿಭಟನೆಯ ನಡುವೆಯೂ ಒತ್ತುವರಿಯನ್ನು ತೆರವುಗೊಳಿಸಿ ತಮ್ಮ ಕಾರ್ಯಸಾಮರ್ಥ್ಯವನ್ನು ರುಜುವಾತುಪಡಿಸಿದ್ದರು. ಅಲ್ಲಿಂದ ನಂತರ ಇವರು ಯಾವುದೇ ಸ್ಥಳಕ್ಕೆ ಹೋದರೂ ಅರಣ್ಯ ಒತ್ತುವರಿದಾರರಿಗೆ ಸಣ್ಣದೊಂದು ನಡುಕ ಇದ್ದೇ ಇರುತ್ತದೆ. ಅರಣ್ಯದೊಳಗೆ ಕಾರ್ಯನಿರ್ವಹಿಸುವಾಗ ಹಲವು ಬಾರಿ ಅಪಾಯಕರ ಪ್ರಸಂಗಗಳೂ ಇವರಿಗೆ ಎದುರಾಗಿವೆ. ಒಮ್ಮೆ ಹಾವೇರಿಯಲ್ಲಿ ಕರಡಿ ಸಂರಕ್ಷಣಾ ಕಾರ್ಯದಲ್ಲಿರುವಾಗ ಕರಡಿ ದಾಳಿಯಿಂದ ಕೂದಲೆಳೆ ಅಂತರದಲ್ಲಿ ಪಾರಾಗಿದ್ದರು. ಇಂತಹ ಅನೇಕ ಉದಾಹರಣೆಗಳಿದ್ದರೂ ಯಾವುದಕ್ಕೂ ಅಂಜುವುದಿಲ್ಲ, ಅಳುಕುವುದಿಲ್ಲ ಎಂಬುದು ಅವರ ದಿಟ್ಟ ನುಡಿ.

ಈ ಕೆಲಸ ದೇವರು ನೀಡಿದ ಉಡುಗೊರೆ ಎಂದೇ ಅವರು ಭಾವಿಸುತ್ತಾರೆ. ಸಾರ್ವಜನಿಕರು ಅರಣ್ಯ ನೋಡಲು, ಅರಣ್ಯದಲ್ಲಿ ಕಾಲ ಕಳೆಯಲು, ವನ್ಯಜೀವಿಗಳನ್ನು ವೀಕ್ಷಿಸಲು ಹಣ ನೀಡಿ ಬರುತ್ತಾರೆ. ಆದರೆ, ಅರಣ್ಯಾಧಿಕಾರಿಗಳಿಗೆ ಅರಣ್ಯ ಹಾಗೂ ವನ್ಯಜೀವಿಗಳೊಂದಿಗೆ ಕೆಲಸ ಮಾಡುವ ಅವಕಾಶ ಇದೆ. ಇದು ಕೇವಲ ಅವಕಾಶವಲ್ಲ, ಇದೊಂದು ಬಗೆಯ ‘ಗಿಫ್ಟ್’ ಎಂದೇ ಅವರು ಹೇಳುತ್ತಾರೆ.

‘ನಾವು ಧ್ವನಿ ಇಲ್ಲದ ಅರಣ್ಯಕ್ಕೆ, ವನ್ಯಜೀವಿಗಳಿಗೆ ಧ್ವನಿಯಾಗಿ, ಅವುಗಳನ್ನು ಸಂರಕ್ಷಿಸುವ ಕೆಲಸ ಮಾಡುತ್ತೇವೆ’ ಎಂಬ ಸಮಾಧಾನವಿದೆ ಎನ್ನುತ್ತಾರೆ.

ಇವರ ಪತಿ ಯಶಪಾಲ್ ಕ್ಷೀರಸಾಗರ ಸಹ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದು, ಚಿಕ್ಕಮಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ‘ಅರಣ್ಯ ಇಲಾಖೆಯಲ್ಲಿ ಮಾತ್ರವಲ್ಲ, ಬೇರೆ ಯಾವುದೇ ಹುದ್ದೆಯಲ್ಲಿದ್ದರೂ ಮಹಿಳೆಯರಿಗೆ ಪುರುಷರಿಗಿಂತ ಹೆಚ್ಚಿನ ಒತ್ತಡ ಇದ್ದೇ ಇದೆ. ಅವರು ಉದ್ಯೋಗ ಮತ್ತು ಮನೆ ಎರಡನ್ನೂ ನಿಭಾಯಿಸಬೇಕಿದೆ. ಇಷ್ಟಾದರೂ, ನನಗೆಂದೂ ಮರ ಗಿಡಗಳು, ಕಾಡುಪ್ರಾಣಿಗಳೊಂದಿಗಿನ ಕೆಲಸ ಬೇಸರ ತರಿಸಿಲ್ಲ’ ಎಂದು ಅವರು ಹೇಳುತ್ತಾರೆ.

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65